	2. ತಾಯಪ್ಪ, ಸಹಾಯಕ, ಪಿ.ಹೆಚ್.ಸಿ., ಕಡಚೂರು, ಸೈದಾಪುರ, ಯಾದಗಿರ್ ಜಿಲ್ಲೆ.	
330	ಭೀಮೇಶಪ್ಪ ಮದನ, ಕ್ಲಸ್ಟ್ ಅಸಿಸ್ಟೆಂಟ್, ಶಿಕ್ಷಣಾಧಿಕಾರಿ, (ಸಿಎಇಓ), ಸೇಡಂ.	ಹೌದು
331	ಚಾಂದ್‌ಬಿ, ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಯಾದಗಿರ್.	ಇಲ್ಲ
332	ರಾಜಶೇಖರ ಪಾಟೀಲ್, ಆರ್.ಐ., ತಹಶೀಲ್ದಾರ್‌ರವರ ಕಛೇರಿ, ಯಾದಗಿರ್.	ಇಲ್ಲ

ಪರಿವರ್ತಿಸಲಾದ ಕಂದಾಯ ಗ್ರಾಮಗಳ ಮಾಹಿತಿ ಪಡೆಯುವುದು

910 ಶ್ರೀ ಪಾಟೀಲ್ ಬಿ. ಸಿ. (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆವಿಗೂ ಪರಿವರ್ತಿಸಲಾದ ಕಂದಾಯ ಗ್ರಾಮಗಳೆಷ್ಟು ಹಾಗೂ ಈವರೆವಿಗೂ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸದೆ ಇರುವ ಗ್ರಾಮಗಳನ್ನು ಪರಿವರ್ತಿಸುವ ಯೋಜನೆ ಸರ್ಕಾರದ ಗಮನದಲ್ಲಿ ಇದೆಯೇ;

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಈವರೆವಿಗೂ ಪರಿವರ್ತಿಸಲಾದ ಕಂದಾಯ ಗ್ರಾಮಗಳ ಸಂಖ್ಯೆ: 449

ಈವರೆವಿಗೂ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸದೆ ಇರುವ ಗ್ರಾಮಗಳನ್ನು ಪರಿವರ್ತಿಸುವ ಯೋಜನೆ ಸರ್ಕಾರದ ಗಮನದಲ್ಲಿ ಇದೆ.

ಕಾನೂನು ತಜ್ಞ ಡಾ: ಎಲ್.ಜಿ.ಹಾವನೂರು ಸ್ಮಾರಕ ಭವನ ನಿರ್ಮಾಣ

980 ಶ್ರೀ ಓಲೇಕಾರ ನೆಹರೂ ಚನ್ನಬಸಪ್ಪ (ಹಾವೇರಿ ಕ್ಷೇತ್ರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕು ಅಗಡಿ ಗ್ರಾಮದಲ್ಲಿ ಜನಿಸಿದ ಡಾ: ಎಲ್.ಜಿ. ಹಾವನೂರು ಇವರು ಕಾನೂನು ತಜ್ಞ ಹಾಗೂ ಹಿಂದುಳಿದ ಆಯೋಗದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇವರ ಹುಟ್ಟೂರಿನಲ್ಲಿ ಸ್ಮಾರಕ ಭವನ ಕಟ್ಟುವ ಪ್ರಸ್ತಾವವೇ ನಾದರೂ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಈ ವರ್ಷದ ಅನುದಾನದಲ್ಲಿ 2-00 ಕೋಟಿ ಹಣ ವಿನಿಯೋಗಿಸಿ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗುವುದೇ?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಪ್ರಸ್ತಾವನೆ ಬಂದಿದೆ

ಇ) ರೂ.1.00 ಕೋಟಿ ಅನುದಾನ ಕೋರಿ ಪ್ರಸ್ತಾವನೆ ಬಂದಿದ್ದು, ಇದು ಪರಿಶೀಲನೆಯಲ್ಲಿದೆ.

371 Sri Vasantha Bangera.K.(Beltangadi) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a) Is it truer that more grant is being released to the constituencies of ruling party members and less grant to the constituencies of Oppostion party members?

b) What measure will be undertaken to remove this disparity?

Sri Govind. M.Karajol (Minister for Minor Irrigation, Planning & Statistics) :

a) No.

Equal grant has been released to all the constituencies under Karnataka Legislators Local Area Development Scheme.

b) Does not arise